**ಸಾಕ್ಷಿಯನ್ನು ಪುನಃ ಕರೆಸಿ ದಿನಾಂಕಃ17.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ.ಸಿ ಎಲ್ ಬಿ ವಕೀಲರಿಂದಃ**

ನನ್ನ ತಂದೆಯ ಹೆಸರು ಬಸಪ್ಪ, ಅವರ ತಂದೆಯ ಹೆಸರು ಚನ್ನಂಜಯ್ಯನ ಬಸಪ್ಪ. ಚನ್ನಂಜಯ್ಯನ ಬಸಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರುಗಳೆಂದರೆ ದೇವಿರಮ್ಮ ಮತ್ತು ಪುಟ್ಟನಂಜಮ್ಮ. ದೇವಿರಮ್ಮ ರವರಿಗೆ ದೇವರಾಜಪ್ಪ ಒಬ್ಬರೇ ಮಗ. ಪುಟ್ಟನಂಜಮ್ಮರಿಗೆ ಆರು ಜನ ಮಕ್ಕಳು. ನನ್ನ ತಾತ ಚನ್ನಂಜಯ್ಯನ ಬಸಪ್ಪ ರವರು ಮೊದಲನೇ ಹೆಂಡತಿ ದೇವಿರಮ್ಮ ಮತ್ತು ಮಗನಿಗೆ ಮೊದಲೇ ಭಾಗವನ್ನು ನೀಡಿರುತ್ತಾರೆ ಎಂದರೆ ಸರಿ. ನನ್ನ ತಾತ ಚನ್ನಂಜಯ್ಯನ ಬಸಪ್ಪ ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಬಸಪ್ಪ ರವರಿಗೆ 2 ಮತ್ತು 3 ನೇ ಪ್ರತಿವಾದಿ ಹಾಗೂ ನಾನು ಮಕ್ಕಳು ಎಂದರೆ ಸರಿ. ನನ್ನ ತಾತ ಮೊದಲನೇ ಹೆಂಡತಿ ಮತ್ತು ಮಗನಿಗೆ 1947 ರಲ್ಲೇ ವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿ. ಅದೇ ರೀತಿ 2 ನೇ ಹೆಂಡತಿ ಮತ್ತು ಮಕ್ಕಳಿಗೆ ಸರ್ವೆ ನಂ.191 ರಲ್ಲಿ 2 ಎಕರೆ 32 ಗುಂಟೆ ಜಮೀನು ನೀಡಿದ್ದರು ಎಂದರೆ ಸರಿ. ತನ್ನ ಮತ್ತು ಹೆಂಡತಿಯ ಜೀವನಾಂಶಕ್ಕಾಗಿ ಜಮೀನನ್ನು ಇಟ್ಟುಕೊಂಡಿದ್ದರು ಎಂದರೆ ಸರಿ. ಅದರ ವಿಸ್ತೀರ್ಣ ನನಗೆ ತಿಳಿದಿಲ್ಲ. 3 ನೇ ಪ್ರತಿವಾದಿಯ ಮದುವೆ ಮೃತ ವಾದಿಯವರ ಮದುವೆಗೂ ಮೊದಲೇ ಆಗಿತ್ತು ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿ. ಹಿರಿಯರಾದ ಕಾರಣ ನನ್ನ ತಂದೆ ಮನೆಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಬೇರೆ ಯಾರು ನೋಡಿಕೊಳ್ಳುತ್ತಿದ್ದರು ಎಂದು ಹೇಳಲು ಆಗುವುದಿಲ್ಲ.ಹಿರಿಯ ಮಗನಾದ ಕಾರಣ ನನ್ನ ತಂದೆ

ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮದುವೆಗೂ ಮೊದಲೇ ಬೆಂಗಳೂರಿಗೆ ಹೊರಟು ಹೋಗಿದ್ದರು. 1995 ರಲ್ಲಿ ಆತ ಬೆಂಗಳೂರಿನಲ್ಲಿ ಹೋಟೇಲ್ ಕೆಲಸಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಕೆಲಸ ಮಾಡುತ್ತಿದ್ದಾಗ ನನ್ನ ತಂದೆ ಪಿಎಫ್ ಮಾಡಿಸಿರುತ್ತಾರೆ ಎಂದರೆ ಸರಿ. ಯಾವ ಇಸವಿಯಲ್ಲಿ ಹೋಟೇಲ್ ಕೆಲಸಕ್ಕೆ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾಖಲಾತಿಗಳ ಆಧಾರದ ಮೇಲೆ ನನ್ನ ತಂದೆ ಯಾವಾಗ ಹೋಟೇಲ್ ಕೆಲಸಕ್ಕೆ ಸೇರಿಕೊಂಡರು ಎಂದು ನಾನು ತಿಳಿದುಕೊಂಡಿಲ್ಲ. ನಿಪಿ-42 1997-98 ನೇ ಸಾಲಿಗೆ ಸಂಬಂಧಿಸಿದ್ದು ಎಂದರೆ ಸರಿ. ನನ್ನ ತಂದೆ ಕೆಲಸಕ್ಕೆ ಸೇರಿ ಮೂರು ವರ್ಷಗಳ ನಂತರ ಪಿಎಫ್ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ಊರಿಗೆ ಬೇಟಿ ನೀಡುತ್ತಿರಲಿಲ್ಲ. 1995 ಕ್ಕೂ ಹಿಂದೆ ನನ್ನ ತಂದೆ ನಮ್ಮ ಗ್ರಾಮದಲ್ಲಿ ಒಟ್ಟು ಕುಟುಂಬದವರೊಂದಿಗೆ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಸದಸ್ಯನಾಗಿದ್ದ ಕಾರಣ ಕೆಲವು ಸ್ವತ್ತುಗಳನ್ನು ನನ್ನ ತಂದೆ ಬಸಪ್ಪನವರ ಹೆಸರಿನಲ್ಲಿ ಕ್ರಯಕ್ಕೆಪಡೆಯಲಾಗಿದೆ ಎಂದರೆ ಸರಿಯಲ್ಲ.

ನಿಡಿ-16 ರಂತೆ ನನ್ನ ತಾತನ ಹೆಸರಿನಲ್ಲಿ ಟೆನೆನ್ಸಿ ಅರ್ಜಿಯನ್ನು ನೀಡಲಾಗಿದೆ ಎಂದರೆ ಸರಿ. ಅವರು ಮೃತಪಟ್ಟನಂತರ ನನ್ನ ತಂದೆ ಮತ್ತು ಅವರ ಸಹೋದರರು ಅರ್ಜಿಯನ್ನು ಮುಂದುವರೆಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-16 ರಂತೆ ಎಲ್ಲರ ಹೆಸರಿಗೂ ಸದರಿ ಆಸ್ತಿ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಮೇಲೆ ನನ್ನ ತಂದೆ ಮತ್ತು ಸಹೋದರರಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಸಹೋದರರು

ಕುಟುಂಬವನ್ನು ನಿರ್ವಹಿಸುತ್ತಿದ್ದ ಕಾರಣ ಒಟ್ಟುಕುಟುಂಬದ ಪರವಾಗಿ ನಿಡಿ-17 ರಂತೆ ಸಾಲ ಪಡೆದಿದ್ದರು ಎಂದರೆ ಸರಿ. ಒಟ್ಟು ಕುಟುಂಬದ ಪರವಾಗಿ ಸದರಿ ಸಾಲವನ್ನು ನಮ್ಮ ತಂದೆ ತೀರಿಸಿರುತ್ತಾರೆ ಎಂದರೆ ಸರಿ.

ನಿಡಿ-1 ರಂತೆ 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರತಿವಾದಿಗಳು ಅವರ ಪರವಾಗಿ ನಾನು ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ವಹಿಸಿಕೊಟ್ಟಿಲ್ಲ ಎಂದರೆ ಸರಿ. ನಿಡಿ-2 ಮತ್ತು 3 ರ ಅಡಿಯಲ್ಲಿ ಸ್ವತ್ತುಗಳನ್ನು ಒಟ್ಟುಕುಟುಂಬದಲ್ಲಿದ್ದಾಗ ನನ್ನ ತಂದೆಯ ಹೆಸರಿನಲ್ಲಿ ಕ್ರಯಕ್ಕೆ ಪಡೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ನನ್ನ ತಂದೆ ಹಾಗೂ ಸಹೋದರರಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಸಹೋದರರು ಪಿತ್ರಾರ್ಜಿತ ಸ್ವತ್ತುಗಳಿಂದ ಸದರಿ ಆಸ್ತಿಗಳಿಂದ ಖರೀದಿಸಿರುವ ಕಾರಣ ಎಲ್ಲರಿಗೂ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ಸಹೋದರರು ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗಮಾಡಿಕೊಂಡಿರುತ್ತಾರೆ. ಅದರಂತೆ ಎಲ್ಲಾ 5 ಸಹೋದರರಿಗೂ ತಲಾ 23 ಗುಂಟೆ ಸರ್ವೆ ನಂ.191/1 ನಲ್ಲಿ ಬಂದಿರುತ್ತದೆ. ಆ ಬಗ್ಗೆ ಆಗಿರುವ ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ವಿಭಾಗಪತ್ರಕ್ಕೆ ಮಹಾದೇವಪ್ಪ, ಕೆಂಪಣ್ಣ ಹೆಬ್ಬೆಟ್ಟು ಲಗತ್ತಿಸಿದ್ದು, ಬಸಪ್ಪ, ಶಿವನಂಜಪ್ಪ ಮತ್ತು ಗುರುಮಲ್ಲಪ್ಪ ಸಹಿ ಮಾಡಿರುತ್ತಾರೆ. ಸದರಿ ದಾಖಲೆ 1982 ರಲ್ಲಿ ಆಗಿದ್ದು, ಹಾಜರುಪಡಿಸಿರುತ್ತೇನೆ. ಅವರ ಅನುಭವಕ್ಕೆ ಬಂದ ಸ್ವತ್ತುಗಳಲ್ಲಿ ಅವರೇ ಸ್ವಾಧೀನ ಹೊಂದಿರುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಭೂ-

ನ್ಯಾಯಮಂಡಳಿಯಿಂದ ಮಂಜೂರಾದ ಸ್ವತ್ತು ಹಾಗೂ ನನ್ನ ತಂದೆ ಖರೀದಿಸಿರುವ ಸ್ವತ್ತುಗಳ ಬಗ್ಗೆ ನಮೂದು ಇರುವುದಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದೆ.

**Sd/-**

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**